



# ‘ತಾರಕ’ಮಂತ್ರ!

‘ತಾರಕ್’ ಸಿನಿಮಾದ ಹಾಡುಗಳ ಧ್ವನಿಮುದ್ರಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಎದ್ದು ಕಾಣುತ್ತಿದ್ದುದು ಇಬ್ಬರು ನಾಯಕಿಯರು. ಒಬ್ಬರು ತವರಿನ ಸಿರಿ ಶ್ರುತಿ ಹರಿಹರನ್, ಮತ್ತೊಬ್ಬರು ಆಮದು ಸುಂದರಿ ಶಾನ್ವಿ.

ಇಬ್ಬರ ಪಾತ್ರಗಳಿಗೂ ಸಿನಿಮಾದಲ್ಲಿ ಸಾಕಷ್ಟು ಅವಕಾಶವಿದೆಯಂತೆ. ಚಿತ್ರದ ನಾಯಕ ದರ್ಶನ್ ಮಾತುಗಳಲ್ಲೂ ನಾಯಕಿಯರ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ‘ಒಬ್ಬಾಕೆ ಜೀವನ ಎಂದರೆ ಏನನ್ನುವುದನ್ನು ಕಲಿಸುತ್ತಾಳೆ, ಇನ್ನೊಬ್ಬಳು ಪ್ರೇಮದ ಸವಿ ಉಣಬಡಿಸುತ್ತಾಳೆ’ ಎಂದು ನಾಯಕಿಯರ ಪಾತ್ರಗಳನ್ನು ದರ್ಶನ್ ಉತ್ಸಾಹದಿಂದ ಬಣ್ಣಿಸಿದರು. ತಮ್ಮ ಕೆಲಸ ಹಗುರವಾದುದಕ್ಕೆ ನಾಯಕಿಯರಿಬ್ಬರ ಮೊಗದಲ್ಲೂ ಮುಗುಳುನಗೆ!

ಹೈದರಾಬಾದಿನಲ್ಲಿ ನಡೆಯುತ್ತಿದ್ದ ‘ಕುರುಕ್ಷೇತ್ರ’ ಸಿನಿಮಾದ ಶೂಟಿಂಗ್‌ನಿಂದ ಬಿಡುವು ಮಾಡಿಕೊಂಡು ಕಾರ್ಯಕ್ರಮಕ್ಕೆ ಬಂದಿದ್ದ ಅವರು, ಸಿನಿಮಾದ ಕಥೆಯ ಗಟ್ಟಿತನದ ಬಗ್ಗೆ ಮಾತನಾಡಿದರು. ನಾಯಕನ ಇಮೇಜ್ ಪೋಷಣೆಗಷ್ಟೇ ಸೀಮಿತಗೊಳ್ಳದೆ ಸಂಬಂಧಗಳ ಅನನ್ಯತೆಯ ಕುರಿತು ಮಾತನಾಡುವ ‘ತಾರಕ್’ ಎಲ್ಲ ವರ್ಗದ ಪ್ರೇಕ್ಷಕರಿಗೆ ಇಷ್ಟವಾಗುವ ನಿರೀಕ್ಷೆ ಅವರ ಮಾತುಗಳಲ್ಲಿತ್ತು.

ಪ್ರಕಾಶ್ ‘ತಾರಕ್’ ಸಿನಿಮಾದ ನಿರ್ದೇಶಕರು. ‘ಮಿಲನ’ ಖ್ಯಾತಿಯ ಅವರು, ಈ ಸಿನಿಮಾದ ಮೂಲಕ ಮತ್ತೊಂದು ದೊಡ್ಡ ಗೆಲುವಿಗೆ ಕಾಯುತ್ತಿದ್ದಾರೆ. ಪ್ರಕಾಶ್ ಕಸುಬುದಾರಿಕೆಯ ಬಗ್ಗೆ ದರ್ಶನ್ ಮೆಚ್ಚುಗೆ ವ್ಯಕ್ತಪಡಿಸಿದರು. ನಿಗದಿತ ಶೆಡ್ಯೂಲಿಗಿಂತಲೂ ಕೊಂಚ ಮೊದಲೇ ಸಿನಿಮಾ ಮುಗಿಸಿರುವ ನಿರ್ದೇಶಕರ ಬದ್ಧತೆ ಅವರಿಗಿಷ್ಟವಾಗಿದೆ.

ಯುರೋಪಿನಲ್ಲಿ ಸಾವಿರಾರು ಮೈಲಿ ಸಂಚರಿಸಿರುವ ಚಿತ್ರತಂಡ, ಇಪ್ಪತ್ತು ದಿನಗಳಿಗೂ ಹೆಚ್ಚು ಕಾಲ ಅಲ್ಲಿ ಶೂಟಿಂಗ್ ನಡೆಸಿದೆ. ದಸರೆಯ ಆಸುಪಾಸಿನಲ್ಲಿ ತಾರಕ್ ತೆರೆಗೆ ಬರಲಿದೆ.



# ಕನಸುಗಾರನಿಗೆ ವಾರಸುದಾರ

ರವಿಚಂದ್ರನ್ ಪುತ್ರ ಮನೋರಂಜನ್ ಅಭಿನಯದ ‘ಸಾಹೇಬ’ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಆ. 25ರಂದು ತೆರೆಗೆ). ಮನೋರಂಜನ್ ಅಭಿನಯದ ಚೊಚ್ಚಲ ಚಿತ್ರವಿದು.

‘ಕಂಠಿ’ ಚಿತ್ರವನ್ನು ನಿರ್ದೇಶಿಸಿದ್ದ ಭರತ್ ‘ಸಾಹೇಬ’ ಸಿನಿಮಾದ ನಿರ್ದೇಶಕ. ರವಿಚಂದ್ರನ್ ಪುತ್ರನನ್ನು ನಾಯಕನಾಗಿ ಪರಿಚಯಿಸಲು ಈ ಚಿತ್ರದಲ್ಲವರು ಸಾಕಷ್ಟು ಪ್ರಯತ್ನಪಟ್ಟಿದ್ದಾರಂತೆ. ಹಾಡು–ಕುಣಿತಗಳ ರಂಗಿನ ಜೊತೆಗೆ ಸಶಕ್ತ ಕಥೆಯೂ ಚಿತ್ರದಲ್ಲಿದೆಯಂತೆ. ಇಡೀ ಚಿತ್ರದಲ್ಲಿ ಯುವ ಉತ್ಸಾಹವೊಂದನ್ನು ಕಟ್ಟಿಕೊಡುವ ಪ್ರಯತ್ನ ನಿರ್ದೇಶಕರದು. ಸಾಹೇಬ ಮೂಲಕ ಗಾಂಧಿನಗರಕ್ಕೆ ಮತ್ತೊಬ್ಬ ಕನಸುಗಾರ ದೊರಕಲಿದ್ದಾನೆ ಎನ್ನುವುದು ಚಿತ್ರತಂಡದ ನಿರೀಕ್ಷೆ. ಶಾನ್ವಿ ಶ್ರೀವಾತ್ಸವ್ ‘ಸಾಹೇಬ’ನಿಗೆ ಜೋಡಿಯಾಗಿ ನಟಿಸಿದ್ದಾರೆ. ರವಿಚಂದ್ರನ್‌ರ ನೆಚ್ಚಿನ ಕ್ಯಾಮೆರಾಮನ್ ಜಿ.ಎಸ್.ವಿ. ಸೀತಾರಾಂ ಛಾಯಾಗ್ರಹಣ ಹಾಗೂ ಹರಿಕೃಷ್ಣರ ಸಂಗೀತ ಚಿತ್ರಕ್ಕಿದೆ.

‘ನಾನು ನನ್ನ ಹೆಂಡ್ತಿ’ ಸಿನಿಮಾದ ಜನಪ್ರಿಯ ಗೀತೆ ‘ಯಾರೆ ನೀನು ರೋಜಾ ಹೂವೆ’ ಗೀತೆಯನ್ನು ಈ ಚಿತ್ರದಲ್ಲಿ ಹೊಸ ಸ್ಪರ್ಶ ನೀಡಿ ಹರಿಕೃಷ್ಣ ಬಳಸಿಕೊಂಡಿದ್ದಾರಂತೆ. ತಾರಾಗಣದಲ್ಲಿ ಲಕ್ಷ್ಮಿ, ಕುರಿ ಪ್ರತಾಪ್, ಬುಲೆಟ್ ಪ್ರಕಾಶ್ ಮುಂತಾದವರಿದ್ದಾರೆ.

